**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**– 122/2024 **DW**–1

**ದಿಃ24.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಪಿಎಂ ವಕೀಲರಿಂದಃ**

ನಾನು ಸ್ಲಮ್ ಬೋರ್ಡನಲ್ಲಿ ಸಹಾಯಕ ಕಾರ್ಯಪಾಲಕ ಅಬಿಯಂತರನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಈ ಕೇಸನಲ್ಲಿ ಸಲ್ಲಿಸಿರುವ ಕೈಪಿಯತ್ತನ್ನು ಯಾರು ಹಾಕಿರುತ್ತಾರೆಂದರೆ ಸಾಕ್ಷಿ ನನ್ನ ಹಿಂದೆ ಕೆಲಸ ನಿರ್ವಹಿಸುತ್ತಿದ್ದ ಸಹಾಯಕ ಕಾರ್ಯಪಾಲಕ ಅಬಿಯಂತರರು ಸಲ್ಲಿಸಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕೈಪಿಯತ್ತನ್ನು ಕೇವಲ ಪ್ರತಿವಾದಿ 5 ರವರ ಪರವಾಗಿ ಸಲ್ಲಿಸಿರುತ್ತಾರೆಂದರೆ ಸರಿ. ಪ್ರತಿವಾದಿ 5 ರವರು ಅಧಿಕಾರ ಪತ್ರವನ್ನು ನೀಡಿರುತ್ತಾರೆಂದು ಹೇಳಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನಾನು ಹೇಳಿದಂತೆ ಯಾವುದೆ ಅಧಿಕಾರ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನಾನು ಸದರಿ ದಾಖಲೆ ಹಾಜರುಪಡಿಸದೆ ಇರುವ ಕಾರಣ ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿಯಲು ನನಗೆ ಯಾವುದೇ ಅಧಿಕಾರ ಇಲ್ಲವೆಂದರೆ ಸಾಕ್ಷಿ ಕಾಲಾವಕಾಶ ಕೊಡಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ.

ಪ್ರತಿವಾದಿ ನಂಬರ 1 ರಿಂದ 4 ಇವರ ಪರವಾಗಿ 5 ನೇ ಪ್ರತಿವಾದಿ ಯಾವುದೇ ಕೈಪಿಯತ್ತನ್ನು ಸಲ್ಲಿಸಲ್ಲಿ ಎಂದರೆ ಸಾಕ್ಷಿ ನಾವು ಕೇವಲ 5 ನೇ ಪ್ರತಿವಾದಿ ಪರ ಸಲ್ಲಿಸಿರುತ್ತೇವೆ ಎನ್ನುತ್ತಾರೆ. ನನ್ನ ಪ್ರತಿವಾದಿ ಪತ್ರ 5 ನೇ ಖಂಡಿಕೆಯಲ್ಲಿ ವಾದಿ ಸ್ಲಮ್ ಬೋರ್ಡಗೆ ದಾನಪತ್ರ ಮಾಡಿಕೊಟ್ಟಿದ್ದು ಸರಿ ಇದೆ ಎಂದರೆ ಸಾಕ್ಷಿ ಸರಿ ಇದೆ ಎನ್ನುತ್ತಾರೆ. ವಾದಿ ಬರೆದುಕೊಟ್ಟಿರುವ ಸದರಿ ದಾನ ಪತ್ರ prior to government ಆಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಆಸ್ತಿ ತೆಗೆದುಕೊಳ್ಳ ಬೇಕಾದರೆ ನಮ್ಮ ಸ್ಲಮ್ ಬೋರ್ಡಯಾವುದೇ ರೀತಿಯ acquisition notification ಮಾಡಿಲ್ಲವೆಂದರೆ ಸರಿ. ನನ್ನ ಕೈಪಿಯತ್ತನ ಖಂಡಿಕೆ 6 ರಲ್ಲಿ ಹೇಳಿರುವಂತೆ ನನಗೆ ಯಾವುದೇ ಅಧಿಕಾರ ಇಲ್ಲ ಅದೇ ರೀತಿ ಈ ಬಗ್ಗೆ ಸ್ಲಮ್ ಬೋರ್ಡ ರವರು ಏನಾದರು ಕೇಸು ವಗ್ಯೆರೆ ಮಾಡಿದ್ದಾರಾ ಎಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ. ನಿಶಾನೆ ಪಿ 2 conditional gift deed ಎಂದರೆ ಸರಿ.

ಸದರಿ conditional gift deed ಆಗಿದ್ದು ದಿಃ04–02–2012 ರಂದು ಎಂದರೆ ಸರಿ. ಸದರಿ ನಿಶಾನೆ ಪಿ 2 ರ ಪ್ರಕಾರ ಇರುವಂತಹ ಕಂಡಿಷನಗಳನ್ನು ನಾವು ಇದುವರೆಗೂ implement

ಮಾಡಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾವು 12 ವರ್ಷಗಳ ಕಾಲದವರೆಗೂ implement ಮಾಡದ ಕಾರಣ ವಾದಿಯರು ನಮಗೆ ಮನವಿ ಪತ್ರಗಳನ್ನು ಸಲ್ಲಿಸುತ್ತಾ ಬಂದರು ಎಂದರೆ ಸಾಕ್ಷಿ ಸರಿ ಇದೆ ಎನ್ನುತ್ತಾರೆ. ಅದೇ ಪ್ರಕಾರ ನಿಶಾನೆ ರಂತೆ ತಾಂತ್ರಿಕ ನಿರ್ದೇಶಕರು ಕರ್ನಾಟಕ ಸಮ್ಲ್ ಬೋರ್ಡ ನವರು ನಮಗೆ recommand ಮಾಡುತ್ತಾ ಬಂದರು ಎಂದರೆ ಸರಿ. ದಿಃ22-02-2023 ರಂದು ಸಮ್ಲ್ ಬೋರ್ಡ ಆಯುಕ್ತಕರು ಒಂದು resolution ಪಾಸ ಮಾಡಿ ಅದನ್ನು ನಾವು fulfil ಮಾಡಲು ಆಗುವುದಿಲ್ಲ ಎಂದು ಸರ್ಕಾರಕ್ಕೆ ಒಂದು resolution ಕಳುಹಿಸಿಕೊಟ್ಟರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ದಾನ ಪತ್ರ ಮಾಡಿದ ನಂತರ ವಾದಿ ಆಸ್ತಿಯ ಕಬ್ಜಾದಲ್ಲಿ ಇದ್ದುಕೊಂಡು ಬಂದಿದ್ದಾರೆಂದರೆ ಸಾಕ್ಷಿ ನಮ್ಮ ಸ್ವಾಧೀನದಲ್ಲಿ ಇದೆ ಎನ್ನುತ್ತಾರೆ. ಸದರಿ ಜಮೀನಿನಲ್ಲಿ ವಾದಿಗಳು ಮೇಣಸಿನಕಾಯಿ ಬೆಳೆಯನ್ನು ಸದರಿ ಆಸ್ತಿಯಲ್ಲಿ ಬೆಳೆಯುತ್ತಾ ಬಂದಿದ್ದು ಈಗಲು ಕೂಡಾ ನಿಶಾನೆ ಪಿ 10 ಮತ್ತು ನಿಶಾನೆ ಪಿ 11 ರ ಪ್ರಕಾರ ಮೇಣಸಿನಕಾಯಿ ಬೆಳೆ ಇದೆ ಎಂದರೆ ಸಾಕ್ಷಿ ನಿಶಾನೆ ಪಿ 10 ರಿಂದ ನಿಶಾನೆ ಪಿ 12 ರ ಪ್ರಕಾರ ಪ್ರತ್ಯೇಕ್ಷ ಸ್ವಾಧೀನ ವಾದಿ ಕಡೆ ಇದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಾವಾ ಆಸ್ತಿ ವಾದಿಗಳ ಪ್ರತ್ಯೇಕ್ಷ ಕಬ್ಜಾದಲ್ಲಿ ಇದ್ದರು ಸಹ ನಾವು ಅಂದರೆ ಪ್ರತಿವಾದಿ 5 ವಾದಿಯರ ಸ್ವಾಧೀನಕ್ಕೆ ಅಡ್ಡಿಪಡಿಸಿದ್ದರಿಂದ ವಾದಿ ನಂಬರ 1 ರವರು writ petition ನಂಬರ 100721/2024 file ಮಾಡಿದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ನಿಶಾನೆ ಪಿ 7 ರ ಪ್ರಕಾರ ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಆಸ್ತಿಯ ಮೇಲೆ ಯಾವುದೇ ಬೋಜಾ ಅಥವಾ ಸಾಲ ವಗೈರೆ ಮಾಡಬಾರದು ಎಂದು ನಿರ್ಬಂಧಕಾಜ್ಞೆ ನೀಡಿದ್ದು ಅದು ಕೂಡಾ ಚಾಲ್ತಿಯಲ್ಲಿ ಬಂದಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದುಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ